Kerala Gazette No. 25 dated 23rd June 2020.

**PART I** **Section iii**

# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಜಿ) ಇಲಾಖೆ

## ಅಧಿಸೂಚನೆ

ನಂಬ್ರ. 25650/ಲೆಗ್. ಜಿ2/2017/ಕಾನೂನು. *ತಿರುವನಂತಪುರಂ,* *2018 ಜುಲೈ 3,*
*1193 ಮಿಥುನ 19/*
*1940 ಆಷಾಢ 12.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2018 ಜುಲೈ 3ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 20ನೇ ಅಧಿನಿಯಮ

## 2018ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ

1974ರ ಕೇರಳ ವಿಶ್ವವಿದ್ಯಾಲಯ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1974ರ ಕೇರಳ ವಿಶ್ವವಿದ್ಯಾಲಯ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 26ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 17ನೇ ವಿಭಾಗದ ತಿದ್ದುಪಡಿ.—1974ರ ಕೇರಳ ವಿಶ್ವವಿದ್ಯಾಲಯ ಅಧಿನಿಯಮ (1974ರ 17) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 17ನೇ ವಿಭಾಗದಲ್ಲಿ,—

(ಎ) "ಚುನಾಯಿತ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ,—(i) ಐಟಂ (1)ರ ಬದಲು, ಈ ಕೆಳಗಿನ ಐಟಂನು ಸೇರಿಸತಕ್ಕದ್ದು, ಅದೇನೆಂದರೆ:—

"(1) ಸರಕಾರಿ ಕಾಲೇಜುಗಳ ಪ್ರಿನ್ಸಿಪಾಲರುಗಳು ತಮ್ಮೊಳಗಿನಿಂದ ಚುನಾಯಿಸಲ್ಪಟ್ಟ ಮೂವರು ಪ್ರಿನ್ಸಿಪಲ್‌ರವರು, ಅನುದಾನ ರಹಿತ ಕಾಲೇಜುಗಳ ಹೊರತು ಖಾಸಗಿ ಕಾಲೇಜುಗಳ ಪ್ರಿನ್ಸಿಪಾಲರುಗಳು ತಮ್ಮೊಳಗಿನಿಂದ ಚುನಾಯಿಸಲ್ಪಟ್ಟ ಮೂವರು ಪ್ರಿನ್ಸಿಪಲ್‌ರವರು ಮತ್ತು ಅನುದಾನರಹಿತ ಕಾಲೇಜುಗಳ ಪ್ರಿನ್ಸಿಪಾಲರುಗಳು ತಮ್ಮೊಳಗಿನಿಂದ ಚುನಾಯಿಸಲ್ಪಟ್ಟ ಒಬ್ಬ ಪ್ರಿನ್ಸಿಪಲ್.";

(ii) ಐಟಂ (11)ರಲ್ಲಿ, "ನಾಲ್ಕು ಸದಸ್ಯರು" ಎಂಬ ಪದಗಳ ಬದಲು, "ಒಬ್ಬ ಸದಸ್ಯ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) "ಇತರ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ, ಐಟಂ (4)ರ ನಂತರ, ಈ ಕೆಳಗಿನ ಐಟಂನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(5) ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತಜ್ಞರಾದ ಸರಕಾರಿ ನಾಮನಿರ್ದೇಶಿತ ಒಬ್ಬ ಸದಸ್ಯ.".

3. <u>21ನೇ ವಿಭಾಗದ ತಿದ್ದುಪಡಿ.</u>—ಪ್ರಧಾನ ಅಧಿನಿಯಮದ 21ನೇ ವಿಭಾಗದಲ್ಲಿ, "ಇತರ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ,—

(ಎ) ಐಟಂ (ಎ)ಯಲ್ಲಿ,—

(i) "ಹದಿಮೂರು" ಎಂಬ ಪದದ ಬದಲು, "ಹನ್ನೆರಡು" ಎಂಬ ಪದವನ್ನು ಸೇರಿಸತಕ್ಕದ್ದು;

(ii) ಉಪ-ವಿಭಾಗ (iii)ರಲ್ಲಿ, "ಏಳು" ಎಂಬ ಪದದ ಬದಲು, "ಆರು" ಎಂಬ ಪದವನ್ನು ಸೇರಿಸತಕ್ಕದ್ದು;

(iii) ಉಪ-ವಿಭಾಗ (ii)ರಲ್ಲಿ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

(ii) ಕಾಲೇಜುಗಳ ಇಬ್ಬರು ಪ್ರಿನ್ಸಿಪಲ್‌ರವರು, ಅವರಲ್ಲಿ ಒಬ್ಬರು ಸರಕಾರಿ ಕಾಲೇಜಿನಿಂದಲೂ ಮತ್ತೊಬ್ಬರು ಅನುದಾನ ರಹಿತ ಕಾಲೇಜಿನ ಹೊರತಾದ ಖಾಸಗಿ ಕಾಲೇಜಿನಿಂದಲೂ ಆಗಿರತಕ್ಕದ್ದು.";

(ಬಿ) ಐಟಂ (ಡಿ)ಯ ನಂತರ, ಈ ಕೆಳಗಿನ ಐಟಂನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಇ) ವಿಭಾಗ 17ರಲ್ಲಿ "ಇತರ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ ಐಟಂ (5)ರಲ್ಲಿ ಉಲ್ಲೇಖಿಸಲಾದ ಸದಸ್ಯ.";

4. <u>ರದ್ಧತಿ ಮತ್ತು ರಕ್ಷಣೆ.</u>—(1) 2018ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2018ರ 27)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ಧತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.